ರಾಜ್ಯದಲ್ಲಿ ನಿರ್ಮಿಸಲಾದ ಕೊಳವೆ ಬಾವಿಗಳು

(೭೯೧) ೨೧೬ ಶ್ರೀ ಆರ್.ಎಸ್. ನಾಯಕ್ (ಭಟ್ಕಳ).– ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: –

ಅ) ರಾಜ್ಯದಲ್ಲಿ ೧೯೬೬ ರಿಂದ ಈವರೆಗೆ ಕೇಂದ್ರ ಸರಕಾರದ ನೆರವಿನಿಂದ ಎಷ್ಟು ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ?

ಆ) ಎಷ್ಟು ಜನರಿಗೆ ಕುಡಿಯುವ ನೀರು ದೊರೆಯುವುದೆಂದು ಅಂದಾಜು ಮಾಡಲಾಗಿದೆ?

ಇ) ಸಂಪೂರ್ಣ ರಾಜ್ಯದ ಋಣವನ್ನು ಮಾತ್ರ ಉಪಯೋಗಿಸಿ ೧೯೬೬ರಿಂದ ಈ ತನಕ ಎಷ್ಟು ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ†

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು).—

ಅ) ೬೫೨೨.

ಆ) ೯.೫೮ ಲಕ್ಷ ಜನರಿಗೆ.

ಇ) ೯೦೫೯.

ಶ್ರೀ ಆರ್. ಎಸ್. ನಾಯಕ್.—ಕೇಂದ್ರ ಸರಕಾರದಿಂದ ಹಣ ಬರುವುದಿಲ್ಲವೆಂದು ಬಹಳಷ್ಟು ವಿಚಾರಗಳಲ್ಲಿ ಹೇಳಿದ್ದಿರಿ. ಆದರೆ ಕೇಂದ್ರ ಸರಕಾರದ ನೆರವಿನಿಂದ ೬೫೨೨ ಬಾವಿಗಳನ್ನು ತೆಗೆದಿದ್ದೇವೆಂದು ಹೇಳಿದ್ದಿರಿ. ಈ ಹಿಂದೆ ಆ ರೀತಿ ಹೇಳಿದ್ದು ತಪ್ಪು ಎಂದು ಈಗಲಾದರೂ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಂ. ಪಿ.ಪ್ರಕಾಶ್.—ಯಾರು ಆ ರೀತಿ ಹೇಳಿದ್ದಾರೆ, ಅವರನ್ನು ಕೇಳಿ. ನಾನಂತೂ ಆ ರೀತಿ ಹೇಳಿಲ್ಲ. ಇದು ಯಾರೊಬ್ಬರ ಗುತ್ತಿಗೆಯೂ ಅಲ್ಲ ಇದು ಇಡೀ ದೇಶಕ್ಕೆ ಸಂಬಂಧಪಟ್ಟಿರ ತಕ್ಕಂಥಾದ್ದು. ರಾಜ್ಯ ಸರಕಾರ ಅಂದರೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು.

೩.೩೦ ಪಿ.ಎಂ.

ಆದುದರಿಂದ ಈ ಮಾತನ್ನು ಯಾರು ಹೇಳಿದ್ದಾರೆ, ಅವರ ಹತ್ತಿರ ಈ ಪ್ರಶ್ನೆ ಕೇಳಬಹುದು, ನಾನಂತೂ ಆ ಮಾತನ್ನು ಹೇಳಲಿಲ್ಲ.

ಶ್ರೀ ಆರ್. ಎನ್. ನಾಯಕ್.—ಇಲ್ಲಿ ಸರ್ಕಾರದ ಗುತ್ತಿಗೆಯ ಪ್ರಶ್ನೆ ಇಲ್ಲ. ಯಾರು ಏನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರಕ್ಕೆ ಇಲ್ಲಿಂದ ಅಭ್ಯರ್ಥಿಗಳನ್ನು ಆರಿಸಿ ಕಳುಹಿಸಿದ್ದೇವೆ, ರಾಜ್ಯ ಸರ್ಕಾರಕ್ಕೂ ಆರಿಸಿ ಕಳುಹಿಸಿದ್ದೇವೆ. ಬೇಗಿರುವಾಗ ಕೇಂದ್ರ ಸರ್ಕಾರದಿಂದ ಏನು ಸಹಾಯ ಬಂತು. ಮತ್ತು ಏನೇನು ಸಹಾಯವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಪ್ರಾಮಾಣಿಕವಾಗಿ ಈ ಸರ್ಕಾರ ಉತ್ತಮವಾದ ಸರ್ಕಾರವಾಗಿದ್ದರೆ ಅದನ್ನು ಹೇಳಬೇಕಾಗುತ್ತದೆ, ಇಲ್ಲಿ ಎಲ್ಲರೂ ಒಂದೇ ಎಂದು ಹೇಳುವುದು. ಕೊನೆಗೆ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ, ಮುನಿಸಿಪಾಲಿಟಿ ಎಲ್ಲವೂ ಒಂದೇ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳನ್ನು ನೀವು ಇಲ್ಲಿ ಹೇಳುವುದಿಲ್ಲ, ಅದನ್ನು ಮುಚ್ಚಿಟ್ಟಿದ್ದೀರಿ, ಇಲ್ಲಿ ನೀವು ಲೋಪವನ್ನು ಮಾಡಿದ್ದೀರಿ ಎಂದು ನನ್ನದು ಆರೋಪ ಇನೆ. ಇಲ್ಲಿ ಲೋಪ ಮಾಡುವಂಥ ಒಂದು ಪ್ರಯತ್ನವನ್ನು ಮಾಡಿದ್ದೀರಿ ಎಂದು ನನ್ನದು ನಿಮ್ಮ ಮೇಲೆ ಆರೋಪ ಇವೆ.

ಶ್ರೀ ಎಂ. ಪಿ. ಪ್ರಕಾಶ್.—ಅವರ ಮೂಲ ಪ್ರಶ್ನೆಗೆ ಇದು ಉಪಪ್ರಶ್ನೆ ಇಲ್ಲ. ಇದನ್ನು ಪ್ರಸ್ತಾಪ ಮಾಡಲು ಬೇರೆ ಮಾರ್ಗಗಳಿವೆ. ಆ ಮಾರ್ಗದಲ್ಲಿ ಅವರು ಪ್ರಸ್ತಾಪ ಮಾಡಬಹುದು. ಜನತೆಯ ಸಮಸ್ಯೆ ಬಂದಾಗ ಮಂಡಲ ಪಂಚಾಯಿತಿ, ಜಿಲ್ಲಾಪರಿಷತ್ತು ಮತ್ತು ರಾಜ್ಯ, ಕೇಂದ್ರ ಒಂದೇ ಎಂಬ ಭಾವನೆಯನ್ನು ಬೇಗಲೂ ಇಟ್ಟುಕೊಂಡಿದ್ದೆವೆ. ನಮ್ಮದು ಉತ್ತಮವಾದ ಸರ್ಕಾರ ಎಂದು ಶ್ರೀಮಾನ್ ನಾಯಕ್‌ರವರು ಪ್ರಮಾಣಪತ್ರವನ್ನು ಕೊಡಬೇಕಾಗಿದೆ. ಏಕೆಂದರೆ ನಾವು ಪ್ರಾಂಜಲ ಮನಸ್ಸಿನಿಂದಲೇ ಎಲ್ಲವನ್ನೂ ಕೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಅನುದಾನವನ್ನು

ಪಡೆದು ೬೫೨ ಕೊಳವೆ ಬಾವಿಗಳನ್ನು ತೋಡಿಸಿದ್ದೇವೆ. ಈ ರೀತಿ ಹೇಳಿರುವುದರಿಂದ ಅವರೇ ಸಮ್ಮನ್ನು ಉತ್ತಮ ಸರ್ಕಾರ ಎಂದು ಕರೆಯಿಸ್ಕೊಂಡಿದ್ದೇನೆ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಇದು ಸ್ಟೇಟ್ ಗೌರ್ನಮೆಂಟ್, ಸೆಂಟ್ರಲ್ ಗೌರ್ನಮೆಂಟ್ ಪ್ರಶ್ನೆ ಅಲ್ಲ. ಒಂದೊಂದು ಸಾರಿ ಈ ವಿಚಾರ ಬಂದಾಗ ಮಾನ್ಯ ಲಕ್ಷ್ಮಿಸಾಗರ್ ಮತ್ತು ಬೊಮ್ಮಾಯಿಯವರು ಈ ಮಾತನ್ನು ಹೇಳುತ್ತಾರೆ. ಅವರು ಇಲ್ಲಿ ಇದ್ದಿದ್ದರೆ ಇದೇ ಮಾತನ್ನು ಹೇಳುತ್ತಿದ್ದರು. ಇಂತಹ ಮಾತನ್ನು ಅವರು ಇನ್ನೊಂದು ಸಾರಿ ಹೇಳಬಾರದು.

ಕರ್ನಾಟಕ ನಗರ ನೀರು ಸರಬರಾಜು ಮಂಡಲಿಯಿಂದ ವಶಪಡಿಸಿಕೊಂಡ ಜಮೀನು

೨೧೭ (೭೯೬) ಶ್ರೀ ಎಂ ರಾಮಪ್ಪ (ಬಳ್ಳಾರಿ):—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಅಲೀಪುರ್‌ನಲ್ಲಿ ಜಲಾಶಯವನ್ನು ಕಟ್ಟಲು ಭೂ ಸ್ವಾಧೀನ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಭೂಸ್ವಾಧೀನ ಮಾಡಿಕೊಳ್ಳಲು ಸರ್ಕಾರವು ಏನು ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ?

ಶ್ರೀ ಆರ್. ವಿ. ದೇಶಪಾಂಡೆ. (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಭೂಸ್ವಾಧೀನ ಕ್ರಮಗಳು ಅಂತಿಮ ಹಂತದಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ರಾಮಪ್ಪ.—ಮಾನ್ಯ ಉಪಾಧ್ಯಕ್ಷರೇ, ಎಷ್ಟು ದಿನದಲ್ಲಿ ಹಣವನ್ನು ಕಟ್ಟುತ್ತಾರೆ ಎಂದು ಇಲ್ಲಿ ಹೇಳಲಿಲ್ಲ. ಇದು ಎಲ್.ಐ.ಸಿ. ಟೋನ್. ಇದು ಲೋನ್ ಎಂದು ಹೇಳಿಬಿಟ್ಟು ಇದುವರೆಗೂ ಇಟ್ಟುಕೊಂಡಿದ್ದಾರೆ. ಅಲ್ಲಿ ನಾಲ್ಕು ತಿಂಗಳಿಂದ ಸಂಬಳ ಸಿಗುತ್ತಿಲ್ಲ, ಎಷ್ಟು ದಿನದಲ್ಲಿ ಈ ಕೆಲಸವನ್ನು ಮಾಡಿಕೊಡುತ್ತಾರೆಂದು ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಅಲ್ಲಿ ಲ್ಯಾಂಡ್ ಅಕ್ವಿಜಿಷನ್ ಆಗಿದೆ, ಪೊಜಿಷನನ್ನು ತೆಗೆದುಕೊಳ್ಳಬೇಕಾದರೆ ೧೫ ಲಕ್ಷ ೪೨ ಸಾವಿರದ ೭೯೬.೨೨ ರೂಪಾಯಿಗಳನ್ನು ನಾವು ಜಮಾ ಮಾಡಬೇಕಾಗಿದೆ ಈ ಹಣವನ್ನು ಆದಷ್ಟು ಜಾಗ್ರತೆ ಜಮಾ ಮಾಡುತ್ತೇವೆ. ಈ ಕೆಲಸವನ್ನು ಆದಷ್ಟು ಬೇಗನೆ ಮಾಡಿಸಿಕೊಡುತ್ತೇವೆ.

ಶ್ರೀ ಎಂ. ರಾಮಪ್ಪ.—ಆದಷ್ಟು ಬೇಗ ಎಂದರೆ ಯಾವಾಗ ? ಈಗಾಗಲೇ ಅಲ್ಲಿ ಬಂದೂವರೆ—ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ಕೇವಲ ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡದಿದ್ದರೆ ಆ ಸ್ಕೀಮ್ ೧೫ ಲಕ್ಷಕ್ಕೋಸ್ಕರವಾಗಿಯೇ ನಿಂತುಬಿಡುತ್ತದೆ. ಅಲ್ಲಿ ಬಹಳ ತೊಂದರೆಯಾಗಿದೆ. ಇನ್ನು ೧೫—೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಅಲ್ಲಿರತಕ್ಕಂಥ ಸ್ಕೀಮ್ ಕೂಡಾ ಇಮ್ಮೆಡಿಯೇಟ್ ಆಗಿ ಆಗುತ್ತದೆ. ಇಲ್ಲದಿದ್ದರೆ ನಿಮ್ಮಲ್ಲಿ ೧೫ ಲಕ್ಷ ರೂಪಾಯಿ ಹಣ ಇಲ್ಲದೇ ದಿವಾಳಿ ಆಗಿದ್ದೀರಿ ಎಂದು ನಾವು ಹೇಳಿಕೊಳ್ಳಬೇಕಾಗುತ್ತದೆ.

ಶ್ರೀ ಆರ್. ವಿ. ದೇಶ್‌ಪಾಂಡೆ.—ಇಲ್ಲಿ ದಿವಾಳಿ ಪ್ರಶ್ನೆಯೇ ಇಲ್ಲ. ಈ ಸ್ಕೀಮ್‌ನ ಅಂದಾಜು ಹಣದ ಬಗ್ಗೆ ಅವರೇ ಹೇಳಿದ್ದಾರೆ.—ಈಗಾಗಲೇ ಮೂರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇಲ್ಲಿ ಕೆಲವೊಂದು ಟೆಕ್ನಿಕಲ್ ಪ್ರಾಬ್ಲಮ್ಸ್ ಇದೆ. ೧೫ ಲಕ್ಷ ರೂಪಾಯಿಗಳನ್ನು ಆದಷ್ಟು ಬೇಗನೆ ಜಮಾ ಮಾಡಿ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ಇಲ್ಲಿ ಟೆಕ್ನಿಕಲ್ ಪ್ರಾಬಲಂ ಏನೂ ಇಲ್ಲವೆಂದು ಹೇಳುತ್ತೇನೆ. ನಮಗೆ ಹಣವನ್ನು ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಆರ್: ವಿ. ದೇಶ್‌ಪಾಂಡೆ.—ನಾನು ಈಗಾಗಲೇ ಹೇಳಿದೆ. ನಾನು ಮತ್ತು ಮಾನ್ಯ ಶ್ರೀ ಎಂ. ಪಿ. ಪ್ರಕಾಶ್‌ರವರು ಬಳ್ಳಾರಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಚರ್ಚೆಮಾಡಿದ್ದೇವೆ, ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅಲ್ಲಿಯ ನಗರಕ್ಕೆ ಮುಂದಿನ ವರ್ಷದ ಬಜೆಟ್‌ನಲ್ಲಿ